SRI B. SUBBAYYA SHETTY (Minister for Education).—

(a) Yes.

(b) The matter is under examination. Necessary steps are being taken.

ಶ್ರೀ ಭೀಮಣ್ಣ ಖಂಡ್ರೆ.—ಡಾ॥ ಅಡ್ಕೆ ಅವರ ಸಮಿತಿ ವರದಿಯನ್ನು ಸಲ್ಲಿಸಿ ಎಷ್ಟು ದಿವಸ ವಾಯಿತು ಮತ್ತು ತತ್ಸಂಬಂಧವಾಗಿ ಏನು ಕ್ರಮ ಕೈಗೊಂಡಿದ್ದೀರಿ ?

†ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಅವರು ವರದಿಯನ್ನು ಸಲ್ಲಿಸಿ ಸುಮಾರು ೨ ತಿಂಗಳು ಆಗಿರಬಹುದು. ಅದು ಈಗಾಗಲೇ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಭೀಮಣ್ಣ ಖಂಡ್ರೆ. ಎಷ್ಟು ದಿವಸದಲ್ಲಿ ಪರಿಶೀಲನೆ ಮಾಡುತ್ತೀರ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಆಗತ್ಯವಾದಷ್ಟು ದಿವಸದಲ್ಲಿ.

ಶ್ರೀ ಭೀಮಣ್ಣ ಖಂಡ್ರೆ.—ಹೈದರಾಬಾದ್ 'ಕರ್ನಾಟಕ' ವಿರಿಯಾವನ್ನು ವಿದ್ಯಾಭ್ಯಾಸದಲ್ಲಿ ಹಿಂದುಳಿದ ಪ್ರದೇಶವೆಂದು ಹಿಂದೆ ಮಾಡಿದ್ದರಿಂದ ಕಳೆದ ೨೦ ವರ್ಷಗಳಿಂದ ಅಲ್ಲಿ ಕಾಲೇಜುಗಳು ಸ್ಥಾಪನೆಯಾಗಲಿಲ್ಲ. ಅದಕ್ಕಾಗಿ ಅಲ್ಲಿನ ಜನರು ಕಾಂಟ್ರಿಬ್ಯೂಷನ್ ಕೊಟ್ಟು ಖಾಸಗೀ ಕಾಲೇಜೊಂದನ್ನು ಸ್ಥಾಪನೆ ಮಾಡಿದರು. ತಮ್ಮ ಸರ್ಕಾರದ ಮೃತಾಯಿ ಧೋರಣೆಯಿಂದಾಗಿ ಬೇಸರಗೊಂಡ ನಮ್ಮ ಜನರು ಯಾವ ಸಭೆಯಲ್ಲಾದರೂ ನಮ್ಮ ಹೈದರಾಬಾದ್‌ನಲ್ಲಿ ರೀಜನಲ್ ಡೆವಲಪ್‌ಮೆಂಟ್ ಬೋರ್ಡ್ ಮಾಡಿರಿ, ಬಹಳ ಅನ್ಯಾಯವಾಗಿದೆ ಎಂದು ಕೇಳುತ್ತಿದ್ದಾರೆ. ಇಂಥ ಪರಿಸ್ಥಿತಿ ಇದ್ದರೂ ಕೂಡ ಇನ್ನೂ ಮಾಡಿಲ್ಲ. ಈಗಲೂ ಕೂಡ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿ ಸುಮಾರು ೧೦ ವರ್ಷಗಳಾದರೂ ಇನ್ನೂ ನೆಗ್ಲೆಕ್ಟ್ ಮಾಡುತ್ತಿದ್ದೀರಿ. ಅದಕ್ಕೆ ಕೇಳುತ್ತಿದ್ದೇನೆ, ಇವೆಲ್ಲ ಫೀಲಿಂಗ್ಸ್, ಡಿಫಿಕಲ್ಟೀಸ್, ಗ್ರಿವೆನ್‌ಸಸ್ ಅನ್ನು ಗಮನಕ್ಕೆ ತೆಗೆದುಕೊಂಡು ಈ ವರ್ಷವೇ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುತ್ತೀರಾ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಫೀಲಿಂಗ್ಸ್, ಗ್ರಿವೆನ್‌ಸಸ್ ಎಲ್ಲವನ್ನು ಗಮನಕ್ಕೆ ತೆಗೆದುಕೊಂಡಿಡಾ : ಅಡ್ಕೆಯವರ ಕಮಿಟಿಯನ್ನು ಕರ್ನಾಟಕ ವಿಶ್ವವಿದ್ಯಾನಿಲಯದವರು ನೇಮಕ ಮಾಡಿದರು. ಆ ಸಮಿತಿಯವರು ವರದಿಯನ್ನು ಕೊಟ್ಟಿದ್ದಾರೆ. ಅದನ್ನು ಸರಕಾರ ಪರಿಶೀಲನೆ ಮಾಡುತ್ತಿದೆ. ಅಷ್ಟೇ ಅಲ್ಲದೆ ಆ ವರದಿಯನ್ನು ಕಾರ್ಯಗತಗೊಳಿಸುವುದಕ್ಕೆ ಒಂದು ಕಮಿಷನ್ ಕೂಡ, ಮಾಡುತ್ತೇವೆಂದುನೆನ್ನೆ ದಿವಸ ಈ ಸಭೆಯಲ್ಲಿ ಹೇಳಿದ್ದೆ. ಆ ರೀತಿ ಮಾಡಿ ಆದಷ್ಟು ಕ್ಷಿಪ್ರದಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆಯಾಗುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಭೀಮಣ್ಣ ಖಂಡ್ರೆ.—ಒಂದು ಸಮಿತಿಯನ್ನು ಮಾಡಿದಿರಿ, ಈಗ ಇನ್ನೊಂದು ಕಮೀಷನ್ ಮಾಡುವುದಕ್ಕೆ ಹೊರಟಿದ್ದಿರಿ ; ಹೀಗೆ ಎಷ್ಟು ಕಮೀಷನ್‌ಗಳನ್ನು ಮಾಡುತ್ತೀರಿ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಎಕ್ಸಿಕ್ಯೂಟ್ ಮಾಡಲಿಕ್ಕೆ ಆವುಗಳನ್ನು ಮಾಡಬೇಕಾಗುತ್ತದೆ.

ಅಧ್ಯಕ್ಷರು : ಈಗ ತಡೆಹಿಡಿಯಲಾಗಿದ್ದ ಪ್ರಶ್ನೆ ನಂ. ೨೯೩, (ಲಿನೇ ಲಿಸ್ಟ್‌ನಿಂದ)

Irregularities in Karnataka Charities at Tirupati

293 SRI C. M ARUMUGAM (K. G. F.).—Will the Minister of State for Major and Medium Irrigation and Muzrai be pleased to state :—

(a) whether there is defalcation of about Rs. 1 lakh in the working of Karnataka Charities at the Tirupati Tirumalai Devasthanam ;

(b) if so, the period of occurrence ;

(c) the action taken against the persons responsible for this embezzlement ?

SRI N. BASAVAIAH (Minister of State for Major and Medium Irrigation and Muzrai) .—

(a) Audit has brought to notice some serious irregularities involving a sum of Rs. 2,52,259-40.

(b) 1-4-1972 to 31-3-1977.

(c) The matter is under examination of Government.

SRI C. M. ARUMUGHAM .—May I know whether the accounts of these Charities were being audited annually ?

† ಶ್ರೀ ಎನ್. ಬಸವಯ್ಯ —ಅಲ್ಲಿ ವರ್ಷ ವರ್ಷವೂ ಆಡಿಟ್ ಆಗಿರಲಿಲ್ಲ ; ಕೆಲವು ಕಾರಣಗಳಿಂದ ಅನೇಕ ವರ್ಷಗಳಿಂದ ಆಡಿಟ್ ನಿಂತಿತ್ತು. ಮಿಸ್ ಅಪ್ರೋಪ್ರಿಯೇಷನ್ ಕಂಡುಬಂದಮೇಲೆ ನಾವು ಸ್ಟೇಟ್ ಕಂಟ್ರೋಲರ್ ಆಫ್ ಆಡಿಟ್ ಅವರಿಗೆ ವಹಿಸಿ ಆಡಿಟ್ ಮಾಡಿಕೊಡಿ ಎಂದೆವು. ಈಗ ಆಡಿಟ್ ಆಗಿ ವರದಿ ಬಂದಿದೆ. ಇರೆಗ್ಯುಲ್ಯಾರಿಟೀಸ್ ಆಗಿದೆ ಎಂಬುದು ಕೂಡ ಇಲಾಖೆಯ ಗಮನಕ್ಕೆ ಬಂದಿದೆ.

SRI C. M. ARUMUGAM.—May I know which year of Audit has revealed this embezzlement to the tune of Rs. 2,52,259 ?

ಶ್ರೀ ಎನ್. ಬಸವಯ್ಯ.—೧೯೭೩ ರಿಂದಲೂ ಆಡಿಟ್ ಆಗದೆ ಇರೆಗ್ಯುಲಾರಿಟೀಸ್ ಕಂಡು ಬಂದಿದೆ. ಈಗ ಆಡಿಟ್ ಆದಮೇಲೆ ಎಲ್ಲ ವಿವರವಾಗಿ ಗೊತ್ತಾಗಿದೆ. ಎಷ್ಟು ರೆಕವರಿ ಆಗಬೇಕೆಂಬುದನ್ನು ಕೂಡ ಆಡಿಟ್ ರಿಪೋರ್ಟಿನಲ್ಲಿ ಕೊಟ್ಟಿದ್ದಾರೆ.

SRI C. M. ARUMUGHAM . —Who are the officers involved in this embezzlement and whether they are in service or have retired ?

ಶ್ರೀ ಎನ್. ಬಸವಯ್ಯ.—ಅಲ್ಲಿ ಅಧಿಕಾರದಲ್ಲಿದ್ದಂತಹ ಶ್ರೀ ಗೋವಿಂದಪ್ಪ ಎಂಬುವವರಿಂದ ೩೦ ಸಾವಿರ ರೂಪಾಯಿ ರೆಕವರಿ ಆಗಬೇಕೆಂದು ಗೊತ್ತಾಗಿದೆ. ಅವರು ೧೯೭೧ ರಲ್ಲೇ ನಿವೃತ್ತರಾಗಿರುವುದರಿಂದ ಅವರಿಗೆ ಕೊಡಬೇಕಾದ ಪೆನ್ಷನ್ ವಗೈರೆಯನ್ನು ಕೊಡದಂತೆ ಸರ್ಕಾರ ತಡೆಹಿಡಿದಿದೆ ಆ ಬಗ್ಗೆ ಎನ್‌ಕ್ವೈರಿ ಮಾಡಲಿಕ್ಕೆ ವಿಜಿಲೆನ್ಸ್‌ಗೆ ವಹಿಸಬೇಕೆಂಬ ವಿಚಾರ ಗಮನದಲ್ಲಿರುವುದರಿಂದ, ಈಗ ಇಲಾಖಾ ತನಿಖೆಯಾದ ಮೇಲೆ ಅವರೂ ಕೂಡ ವಿಜಿಲೆನ್ಸ್‌ನಿಂದ ರಿಪೋರ್ಟ್ ಬಂದಮೇಲೆ ಎಷ್ಟು ಹಣವನ್ನು ಕೊಡಬೇಕಾಗುತ್ತದೋ ಅಷ್ಟನ್ನು ಸರ್ಕಾರಕ್ಕೆ ಕೊಡುತ್ತೇನೆಂದು ಬರವಣಿಗೆಯ ಮೂಲಕ ಕೊಟ್ಟಿದ್ದಾರೆ.

SRI C. M. ARUMUGHAM.—What are the reasons for not conducting the enquiry for the last two years though the matter was brought to the notice of the Government before 1977 ?

ಶ್ರೀ ಎನ್. ಬಸವಯ್ಯ.—ಇದಕ್ಕೆ ಕಾರಣ ಇಷ್ಟೆ. ಆಡಿಟ್ ಅನ್ನು ವರ್ಷೇ ವರ್ಷೇ ಮಾಡಿಸಲಿಕ್ಕೆ ತೊಂದರೆ ಏನೆಂದರೆ ಎಲ್ಲಿರತಕ್ಕ ಅಧಿಕಾರಿಗಳು ಕರ್ನಾಟಕದವರು ಹೆಚ್ಚಾಗಿ ಇಲ್ಲ; ಅಲ್ಲಿ ಎಲ್ಲ ಆಂಧ್ರದವರೇ ಹೆಚ್ಚಾಗಿ ಇರುವುದರಿಂದ ಅಲ್ಲಿಗೆ ಹೋದಂತಹ ಮ್ಯಾನೇಜರ್‌ಗಳನ್ನು ತ್ರಿಟನ್ ಮಾಡುವುದು. ಸರಿಯಾದ ರೀತಿಯಲ್ಲಿ ಅಕೌಂಟ್ಸ್, ಕೊಡದೆ ಇರತಕ್ಕದ್ದು, ಏನೇನು ರಿಲೆವೆಂಟ್ ಡಾಕ್ಯಮೆಂಟ್ಸ್, ಓಚರ್ಸ್ ಬೇಕೋ ಅವುಗಳನ್ನು ಒದಗಿಸದೆ ಇರತಕ್ಕ ಪರಿಸ್ಥಿತಿ ಇದೆ. ಆದಕ್ಕೆ ಮಾನ್ಯ ಗೋವಿಂದಪ್ಪನವರು ಭಯಪಟ್ಟರಬೇಕು. ಈಗ ಅವುಗಳನೆಲ್ಲ ಪ್ರೊಡ್ಯೂಸ್ ಮಾಡಿದ ಮೇಲೆ ಆಡಿಟ್ ಮಾಡಲಾಗಿ ಇಂಥವರು ಇನ್‌ವಾಲ್ವ್ ಆಗಿದ್ದಾರೆ, ಇಂಥವರಿಂದ ರೆಕವರಿ ಆಗಬೇಕೆಂದು ನಿರ್ಣಯವಾಗಿದೆ. ಅವರು ಯಾವ ವ್ಯಕ್ತಿಯೇ ಆಗಿರಲಿ ಅವರಿಂದ ರೆಕವರಿ ಮಾಡತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಂ. ತಮ್ಮಯ್ಯ.—ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ, ಅಲ್ಲಿ ಆಂಧ್ರದವರು ಜಾಸ್ತಿ ಇದ್ದಾರೆಂದು ಹೇಳಿದರು, ಆದ್ದರಿಂದ, ಅವರುಗಳನ್ನು ತೆಗೆದು ಅಪರ ಜಾಗದಲ್ಲಿ ಕರ್ನಾಟಕದವರನ್ನು ಹಾಕತಕ್ಕ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಬಸವಯ್ಯ —ಅಲ್ಲಿ ಅವರನ್ನು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಅಪಾಯಿಂಟ್ ಮಾಡಿಕೊಂಡಿಲ್ಲ. ಅವರಿಗೆ ಯಾವ ಒಂದು ಪೇಸ್ಕೇಲನ್ನು ಫಿಕ್ಸ್ ಮಾಡಿಲ್ಲ. ನಾನು ಅಲ್ಲಿಗೆ ಭೇಟಿ ನೀಡಿದ್ದಾಗ ಅಲ್ಲಿದಂತಹ ನ್ಯೂನತೆಗಳು ಕಂಡುಬಂದವು. ಮುಖ್ಯ ಕಾರ್ಯದರ್ಶಿಯವರನ್ನು ಹಾಗೂ ನಮ್ಮ ಕಮೀಷನರನ್ನು ಕರೆಸಿ ಎಲ್ಲ ವಿಚಾರಗಳನ್ನು ತಿಳಿಸಿ, ಆ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ಕರ್ನಾಟಕದಿಂದ ಹೋಗತಕ್ಕವರಿಗೆ ತೊಂದರೆಯಾಗುತ್ತದ್ದರಿಂದ ಅವರಿಗೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಮತ್ತು ಪೇಸ್ಕೇಲ್ಸ್ ಅನ್ನು ಗೊತ್ತುಮಾಡಬೆ ಕೆಂದು ಮಾಡಿದ್ದೇವೆ.

ಅಧ್ಯಕ್ಷರು : ಶ್ರೀ ಎಂ. ವೈ. ಪಾಟೀಲ್‌ರ ಪ್ರಶ್ನೆ ನಂ. ೬೦೯ ಶ್ರೀ ಜಿ. ಪಿ. ಓಡೆಯರಾಜ ಅವರು ಕೇಳಬಹುದು.

Tanks at villages Bindnoor and Afzalpur

609 SRI GOVIND P. VADAYARAJ (Kamalapur) [on behalf of SRI M. Y. PATIL (Afzalpur)].—Will the Minister for Revenue be pleased to state .—

(a) how many years back lands were acquired for the construction of the proposed Tanks at villages Bindnoor and Afzalpur in Afzalpur Taluk ;

(b) whether such land holders have been paid the land acquisition compensation and crop loss compensation ;

(c) if not, why ;

(d) the authority who is responsible for non-payment of compensation ?

SRI B. BASAVALINGAPPA (Minister for Revenue).—

(a) In case of Bindnoor Village, the acquisition proceeding were initiated in June 1977 and in respect of Afzalpur Village, in November 1976.

(b) Land Acquisition proceedings have reached he award stage in respect of Bidnoor Village and compensation will be paid as soon as the award is finally declared.

Final Notification under section 6 (1) of the L.A. Act is yet to be published in respect of lands in Afzalpur Village. Immediately after the publication of the same possession of the land will be taken over and compensation will be paid, as soon as the award is finally declared.

The question of payment of crop compensation does not arise since standing crop was not involved in the process of acquisition.